

ಬಿಪಾಸಾ ಬಸು ಎಂಬ

# ಸುಂದರಿಯ ಸಂಕಟ

**ಚಿ**ತ್ರನಟಿಯರ ಕಷ್ಟಗಳು ಒಂದೆರಡಲ್ಲ; ಅದರಲ್ಲೂ 'ಐಟಂ ಗರ್ಲ್' ಅಥವಾ 'ಸೆಕ್ಸ್ ಬಾಂಬ್' ಎಂಬ ಅಭಿದಾನವಿದ್ದರಂತೂ ಅವರ ಗೋಳುಗಳು ನೂರೆಂಟು. ಪ್ರೇಕ್ಷಕರನ್ನು ಮೆಚ್ಚಿಸಲು ಸಾಕಷ್ಟು ಬೋಲ್ಡ್ ಆಗಿ ತೆರೆಯ ಮೇಲೆ ಕಾಣಿಸಿಕೊಳ್ಳಬೇಕು, ಜತೆಗೇ ಚೂರಾದರೂ ಅಭಿನಯದ ಅವಕಾಶ ದಕ್ಕುವಂತೆ ಯತ್ನಿಸಬೇಕು. ಹಾಗೆ ಅಭಿನಯದ ಅವಕಾಶ ಇದ್ದಾಗಲೂ ಬಟ್ಟೆ ಬಿಚ್ಚೋದಕ್ಕೆ ತಯಾರಾಗಿಯೇ ಇರಬೇಕು. ಅದರ ಮಧ್ಯೆ ಪ್ರತಿದಿನವೆಂಬಂತೆ ಮಾಧ್ಯಮಗಳಲ್ಲಿ ತಮ್ಮ ಬಗ್ಗೆ ಬರುವ ವದಂತಿಗಳು ವೃತ್ತಿಜೀವನಕ್ಕೆ ಧಕ್ಕೆ ತರದಂತೆ ನೋಡಿಕೊಳ್ಳಬೇಕು!

ಬಾಲಿವುಡ್‌ನ ಬಿಂದಾಸ್ ಬೆಡಗಿ ಬಿಪಾಸಾ ಬಸು ಸದ್ಯಕ್ಕೆ ಇಂತಹ ಸಂಕಷ್ಟಗಳಲ್ಲಿ ಸಿಲುಕಿದ್ದಾಳೆ. ಉದ್ದನೆಯ ಕೈಕಾಲುಗಳು, ಮಾದಕ ಮುಖ ಮತ್ತು ಬಿಂದಾಸ್ ನಡವಳಿಕೆಯಿಂದಲೇ ಸುದ್ದಿಯಾಗಿರುವ ಬಿಪಾಸಾ ಈಗ ಉತ್ತರಪ್ರದೇಶದ ರಾಜಕಾರಣಿ ಅಮರ್‌ಸಿಂಗ್ ಜತೆಗಿನ ಟೆಲಿಫೋನ್ ಸಂಭಾಷಣೆಯ ಧ್ವನಿಸುರುಳಿಯ ವಿವಾದವೊಂದರಲ್ಲಿ ಸಿಲುಕಿದ್ದಾಳೆ. ಸುಪ್ರೀಂಕೋರ್ಟಿನಿಂದ ಆರು ವರ್ಷಗಳ ಕಾಲ ತಡೆಯಾಜ್ಞೆ ಪಡೆದಿದ್ದ ಈ ಧ್ವನಿಸುರುಳಿ, ಇದೀಗ ಬಹುತೇಕ ಪತ್ರಿಕೆ, ವೆಬ್‌ಸೈಟ್‌ಗಳಲ್ಲಿ ಲಭ್ಯ. ಅಮರಸಿಂಗ್ ಜತೆ ಬಿಪಾಸಾ ನಡೆಸಿದ್ದಾಳೆ ಎನ್ನಲಾದ 'ರಸಿಕ ಸಂಭಾಷಣೆ' ಸದ್ಯಕ್ಕೆ ಬಾಲಿವುಡ್‌ನಲ್ಲಿ ಬಿಸಿ ಬಿಸಿ ಚರ್ಚೆಯ ವಿಷಯ.

'ಅಮರ್‌ಸಿಂಗ್ ಜತೆಗೆ ನಾನು ಯಾವತ್ತೂ ಭೇಟಿಯಾಗಿಲ್ಲ, ಟೆಲಿಫೋನ್‌ನಲ್ಲಿ ಮಾತನಾಡಿಲ್ಲ. ಟೇಪ್‌ನಲ್ಲಿ ಮಾತನಾಡಿದಾಕೆ ತನ್ನ ಹೆಸರು ಬಿಪಾಸಾ ಎಂದು ಹೇಳಿದ್ದಷ್ಟಕ್ಕೆ ಅದನ್ನು ತಂದು ತನ್ನ ಕುತ್ತಿಗೆಗೆ ಕಟ್ಟಿದ್ದಾರೆ. ಆ ಧ್ವನಿ ನನ್ನದೆಂದು ಯಾರಾದರೂ ಸಾಬೀತು ಪಡಿಸಲಿ' ಎಂದು ಬಿಪಾಸಾ ಸವಾಲು ಹಾಕಿದ್ದಾಳೆ. ಆದರೆ ತೆರೆಯ ಮೇಲೆ ಹಾಗೂ ತೆರೆಯ ಹೊರಗೆ ಬಿಂದಾಸ್ ಬದುಕಿನ ಶೈಲಿಗೆ ಹೆಸರುವಾಸಿಯಾಗಿರುವ ಬಿಪಾಸಾಳ ಮಾತನ್ನು ಹೆಚ್ಚಿನವರು ನಂಬುತ್ತಿಲ್ಲ! ಇತ್ತೀಚಿನವರೆಗೂ ಜಾನ್ ಅಬ್ರಹಾಂ ಜತೆ ಕೂಡಿಕೆ ಓಡಾಟ ಮಾಡಿಕೊಂಡಿದ್ದ ಬಿಪಾಸಾ, ಈಗ ಹೊಸ ಬಾಯ್‌ಫ್ರೆಂಡ್‌ಗಳ ಹುಡುಕಾಟವನ್ನೂ ಬಿಂದಾಸ್ ಆಗಿಯೇ ನಡೆಸುತ್ತಿದ್ದಾಳೆ. ಈಕೆಯ ಜೀವನಶೈಲಿ ನೋಡಿದ ಹಾಗೂ ಅಮರ್‌ಸಿಂಗ್ ರಸಿಕತೆಯ ಪರಿಚಯವಿರುವ ಯಾರೂ ಈಗ ಬಿಪಾಸಾಳ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ!

ಬಿಪಾಸಾ ಮಾಡೆಲ್ ಹಾಗೂ ಚಿತ್ರನಟಿಯಾದದ್ದು ಆಕಸ್ಮಿಕವಾಗಿ. ಪಿಯುಸಿವರೆಗೆ ಸೈನ್ಸ್ ಓದಿ ಡಾಕ್ಟರ್ ಆಗಬೇಕೆಂದಿದ್ದ ಈ ಬಂಗಾಳಿ ಸುಂದರಿ, ಡಿಗ್ರಿಯಲ್ಲಿ ಕಾಮರ್ಸ್ ಓದಿದಳು. ಗಾದ್ರೆಜ್–ಸಿಂಥಾಲ್ ಸೂಪರ್‌ಮಾಡೆಲ್ ಸ್ಪರ್ಧೆಯಲ್ಲಿ ಅಚಾನಕ್ಕಾಗಿ ಪ್ರವೇಶ ಪಡೆದು ಪ್ರಶಸ್ತಿ ಗೆದ್ದ ಬಿಪಾಸಾ ಆ ಬಳಿಕ ಫೋರ್ಡ್ ಕಂಪೆನಿಯ ಪ್ರಾಯೋಜಕತ್ವದಲ್ಲಿ ನ್ಯೂಯಾರ್ಕ್‌ಗೆ ತೆರಳಿ ಅಲ್ಲಿ ಮಾಡೆಲಿಂಗ್‌ನ ಒಳಹೊರಗನ್ನೆಲ್ಲ ಅರೆದು ಕುಡಿದಳು. ವಾಪಸ್ ಬಂದಾಗ, ಬಾಲಿವುಡ್ ಬಾಗಿಲು ತೆರೆದು ನಿಂತಿತ್ತು. 'ಅಜ್‌ನಬೀ' ಎಂಬ ಮೊದಲ ಚಿತ್ರದಲ್ಲಿ ಅಕ್ಷಯ ಕುಮಾರ್ ಜತೆಗೆ ಬಿಂದಾಸ್ ಹುಡುಗಿಯ ಪಾತ್ರದಲ್ಲಿ ಅಭಿನಯಿಸಿದ್ದು ಕ್ಲಿಕ್ ಆಯಿತು. ಫಿಲಂಫೇರ್ ಪ್ರಶಸ್ತಿಯೂ ಸಿಕ್ಕಿತು. 2002ರಲ್ಲಿ ತೆರೆಗೆ ಬಂದ 'ರಾಝ್' ಈಕೆಯನ್ನು ಖಳ ಛಾಯೆಯ ನಾಯಕಿ ಪಾತ್ರಗಳಿಗೆ ಫಿಕ್ಸ್ ಮಾಡಿದ್ದೂ ಅಲ್ಲದೆ ಬಾಕ್ಸಾಫೀಸ್‌ನಲ್ಲಿ ಹಣ ದೋಚಿತು. ಅಲ್ಲಿಂದೀಚೆಗೆ ಬಿಪಾಸಾಗೆ ಅವಕಾಶಗಳ ಕೊರತೆ ಆಗಲೇ ಇಲ್ಲ.

ಸದ್ಯಕ್ಕೆ ಬಾಲಿವುಡ್‌ನ ಕೈಬೆರಳೆಣಿಕೆಯ 'ಐಟಂ ಸಾಂಗ್ ರಾಣಿ'ಯರ ಪೈಕಿ ಮುಂಚೂಣಿಯಲ್ಲಿರುವ ಬಿಪಾಸಾ, ತೆಲುಗು, ತಮಿಳು ಮತ್ತು ಬಂಗಾಳಿ ಸಿನಿಮಾಗಳಲ್ಲೂ ನಟಿಸಿದ್ದಾಳೆ. ಆದರೆ ಈಕೆಯ ನಟನಾ ಪ್ರತಿಭೆಗಿಂತ ಹೆಚ್ಚಾಗಿ ವಿವಾದಗಳಿಗೇ ಹೆಚ್ಚು ಮಹತ್ವ ಸಿಗುತ್ತಿದೆ. ಈಗಿನ ಅಮರ್‌ಸಿಂಗ್ ಟೇಪ್ ಹಗರಣವೂ ಅದರಲ್ಲಿ ಒಂದು. ಸದ್ಯಕ್ಕೆ ಪ್ರಚಾರದ ಅಗತ್ಯವೇ ಇಲ್ಲದ ಈ ಬೆಡಗಿ, ಹೊಸ ಹಗರಣದಿಂದ ಇಮೇಜ್‌ಗೆ ಧಕ್ಕೆ ಆಗದಿದ್ದರೆ ಸಾಕು ಎಂಬ ಚಿಂತೆಯಲ್ಲಿದ್ದಾಳೆ.

■ ಬಿಂದು